ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/06/ಇಸಿಎಸ್(1)/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:20-11-2017

**ಸುತ್ತೋಲೆ**

ವಿಷಯ: 2017 ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆ ಸಮಯದಲ್ಲಿ ಮೊಬೈಲ್ ಬಳಕೆ ನಿಷೇಧಿಸಿರುವ ಕುರಿತು.

ಉಲ್ಲೇಖ:1) ದಿನಾಂಕ:17-01-2015 ರಂದು ನಡೆದ ತಾಂತ್ರಿಕ ಪರೀಕ್ಷಾ ಮಂಡಳಿಯ 159ನೇ ಕೇಂದ್ರ ಸಭೆಯ ನಿರ್ಣಯ ಸಂಖ್ಯೆ:159.2.10

2) ಸರ್ಕಾರಿ ಆದೇಶ ಸಂಖ್ಯೆ: ಇಡಿ 57 ಟಿಪಿಇ 2013, ದಿನಾಂಕ:17/04/2015.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017 ರ ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು ದಿನಾಂಕ:22-11-2017 ರಿಂದ ಆರಂಭಗೊಳ್ಳಲಿದ್ದು, ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು/ ಮುಖ್ಯ ಅಧೀಕ್ಷಕರು ತಮಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ವಿಭಾಗ ಮುಖ್ಯಸ್ಥರು ಸೇರಿದಂತೆ ಎಲ್ಲಾ ಉಪನ್ಯಾಸಕರುಗಳು ಕೊಠಡಿ ಮೇಲ್ವಿಚಾರಣಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನೋಡಿಕೊಳ್ಳಲು ತಿಳಿಸಲಾಗಿದೆ.

ಉಲ್ಲೇಖ (1)ರನ್ವಯ ವಿದ್ಯಾರ್ಥಿ ಮಾಲ್ ಪ್ರಾಕ್ಟೀಸ್ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ, ಪರೀಕ್ಷೆಗಳ ಸಮಯದಲ್ಲಿ ವಿದ್ಯಾರ್ಥಿಗಳು ಹಾಗೂ ಕೊಠಡಿ ಮೇಲ್ವಿಚಾರಕರುಗಳು ಮೊಬೈಲ್ ಫೋನ್‌ಗಳನ್ನು ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಪ್ರಯುಕ್ತ ಪರೀಕ್ಷಾ ಕೊಠಡಿಗಳಲ್ಲಿ, ಕೊಠಡಿ ಮೇಲ್ವಿಚಾರಕರುಗಳು ಮೊಬೈಲ್ ಫೋನ್‌ಗಳನ್ನು ಬಳಸದಂತೆ ಹಾಗೂ ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರೆ ವಿದ್ಯುನ್ಮಾನ ಪರಿಕರಗಳನ್ನು ಹೊಂದಿರದಂತೆ ನಿಗಾವಹಿಸಲು ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು ಮತ್ತು ಉಪ ಮುಖ್ಯ ಅಧೀಕ್ಷಕರುಗಳಿಗೆ ಸೂಚಿಸಲಾಗಿದೆ. ತಪ್ಪಿದಲ್ಲಿ ಸರ್ಕಾರಿ ಆದೇಶದ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು/ಉಪಮುಖ್ಯ ಅಧೀಕ್ಷಕರು/ಪರೀಕ್ಷಕರು/ವೀಕ್ಷಕರುಗಳಿಗೆ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ:

1. ಇ ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2. ಗಣಕ ಕೇಂದ್ರ– ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.
3. ತನಿಖಾದಳಗಳ ಮುಖಂಡರುಗಳಿಗೆ – ಮಾಹಿತಿಗಾಗಿ.